<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 513 |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 20.08.2026 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ 7 ಜಿಲ್ಲೆಗಳಲ್ಲಿ ಕಾಣೆಯಾದ ಹಾಗೂ ಅಪಹರಣಕ್ಕೊಳಗಾದ ಬಾಲಕಿಯರು ಮತ್ತು ಮಹಿಳೆಯವರ ಒಟ್ಟು ಸಂಖ್ಯೆ ಎಷ್ಟು; (ಜಿಲ್ಲಾವಾರು ಹಾಗೂ ವರ್ಷವಾರು ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ 7 ಜಿಲ್ಲೆಗಳಲ್ಲಿ ಮತ್ತು ಕಲಬುರಗಿ ನಗರ ಸೇರಿದಂತೆ ಬಾಲಕಿಯರ ಮತ್ತು ಮಹಿಳೆಯರು ಕಾಣೆಯಾದ ಹಾಗೂ ಅಪಹರಣಕ್ಕೊಳಗಾದ, ಪತ್ತೆಯಾಗಿರುವ ಹಾಗೂ ಬಾಕಿ ಇರುವ ಪ್ರಕರಣಗಳ ಜಿಲ್ಲಾವಾರು ಹಾಗೂ ವರ್ಷವಾರು ವಿವರವನ್ನು ಅನುಬಂಧ-1 ಮತ್ತು 2 ರಲ್ಲಿ ಒದಗಿಸಲಾಗಿದೆ. |
| ಆ) | ಮೇಲ್ಕಂಡ ಪ್ರಕರಣಗಳ ಪೈಕಿ ಇದುವರೆಗೆ ಎಷ್ಟು ಬಾಲಕಿಯರು ಹಾಗೂ ಮಹಿಳೆಯವರು ಪತ್ತೆ ಹಚ್ಚಲಾಗಿದೆ ಮತ್ತು ಇನ್ನೂ ಎಷ್ಟು ಪ್ರಕರಣಗಳಲ್ಲಿ ಪತ್ತೆ ಹಚ್ಚಲು ಸಾಧ್ಯವಾಗಿರುವುದಿಲ್ಲ;(ಪತ್ತೆಯಾಗಿರುವ ಹಾಗೂ ಬಾಕಿ ಇರುವ ಪ್ರಕರಣಗಳ ಜಿಲ್ಲಾವಾರು ಮತ್ತು ವರ್ಷವಾರು ವಿವರಗಳನ್ನು ಒದಗಿಸುವುದು) | |
| ಇ) | ಪತ್ತೆ ಹಚ್ಚಲಾದ ಪ್ರಕರಣಗಳ ಪೈಕಿ ಬಾಲಕಿಯವರು ಹಾಗೂ ಮಹಿಳೆಯವರನ್ನು ಅಪಹರಿಸಿರುವುದು ಅಥವಾ ಕಾಣೆಯಾಗಲು ಕಾರಣರಾಗಿರುವ ಆರೋಪಿಗಳ ಸಂಖ್ಯೆ ಎಷ್ಟು; ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಎಷ್ಟು ಆರೋಪಿಗಳನ್ನು ಬಂಧಿಸಲಾಗಿದೆ ಹಾಗೂ ಬಂಧಿತ ಆರೋಪಿಗಳ ವಿರುದ್ಧ ಪ್ರಸ್ತುತ ಯಾವ ರೀತಿಯ ತನಿಖೆ ಮತ್ತು ಕಾನೂನು ಕ್ರಮ ಕೈಗೊಳ್ಳಲಾಗಿದೆ; (ಜಿಲ್ಲಾವಾರು ವಿವರ ಒದಗಿಸುವುದು) | ಕಾಣೆ/ಅಪಹರಣವಾದ ಅಪ್ರಾಪ್ತ ಬಾಲಕಿಯರ ಪ್ರಕರಣದಲ್ಲಿ ಕಡ್ಡಾಯವಾಗಿ ಎಫ್.ಐ.ಆರ್. ಅನ್ನು ಅಪಹರಣ ಕಲಂ ಅಡಿಯಲ್ಲಿ ದಾಖಲಿಸಿಕೊಂಡು ಪತ್ತೆ ಕಾರ್ಯವನ್ನು ಕೈಗೊಳ್ಳಲಾಗುತ್ತದೆ.<br><br>ಅಪ್ರಾಪ್ತರ ಪತ್ತೆ ಸಂದರ್ಭದಲ್ಲಿ ಅಥವಾ ಪತ್ತೆಯಾದ ನಂತರ ಅವರ ಹೇಳಿಕೆ ಅನ್ವಯ ಅಪಹರಣ/ಪೋಕ್ಸೋ ಹಾಗೂ ಇತರ ಅಪರಾಧಗಳಿಗೆ ಸಂಬಂಧಪಟ್ಟ ಕಾಯ್ದೆ /ಕಾನೂನನ್ನು ಅಳವಡಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗುವುದು. ಉಳಿದಂತೆ, ಕಾಣೆ ಪ್ರಕರಣಗಳಲ್ಲಿ |

ಆರೋಪಿಗಳನ್ನು ಬಂಧಿಸಲಾಗುವುದಿಲ್ಲ.

ಮಹಿಳೆಯರ ಕಾಣೆ ಪ್ರಕರಣಗಳಲ್ಲಿ ಪತ್ತೆ ಮಾಡಲಾದ ಮಹಿಳೆಯ ಹೇಳಿಕೆಗಳನ್ನು ಪಡೆಯುವಾಗ ಅವರ ಹೇಳಿಕೆಯಲ್ಲಿ ಕಾಣೆಯಾದವರು ಯಾರಾದರೂ ಬಲವಂತವಾಗಿ ಅಪಹರಣ ಮಾಡಿರುವುದು ಕಂಡುಬಂದಲ್ಲಿ ಅಂತಹ ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಿ ಸಂಬಂಧಪಟ್ಟ ಕಾನೂನುಗಳಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು.

**ಅಪ್ರಾಪ್ತರ ಕಾಣೆ/ಅಪಹರಣ ಪ್ರಕರಣಗಳಲ್ಲಿ ಈ ಕೆಳಕಂಡ ತನಿಖಾ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸಲಾಗುತ್ತದೆ:**

- ಕಾಣೆಯಾಗಲು ನಿಖರ ಕಾರಣ ಪತ್ತೆ ಹಚ್ಚುವ ನಿಟ್ಟಿನಲ್ಲಿ ಬಾಲಕಿ/ಮಹಿಳೆ ಸ್ವಯಂ ಹೋಗಿದ್ದಾರೆಯೇ ಅಥವಾ ಯಾರಾದರೂ ಪ್ರಲೋಭನೆ, ಒತ್ತಡ, ಬೆದರಿಕೆ, ಅಪಹರಣ ಅಥವಾ ಮೋಸದ ಮೂಲಕ ಕರೆದೊಯ್ದಿದ್ದಾರೆಯೇ ಎಂಬುದರ ಬಗ್ಗೆ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ.
- ಆರೋಪಿಗಳ ಗುರುತು ಮತ್ತು ಪಾತ್ರ ಪತ್ತೆ ಕಾಣೆಯಾಗಲು ಕಾರಣರಾದ ವ್ಯಕ್ತಿಗಳ ಮೊಬೈಲ್ ಕರೆ ವಿವರಗಳು (CDR), ಸ್ಥಳ ಮಾಹಿತಿ, ಸಾಮಾಜಿಕ ಜಾಲತಾಣದ ಸಂಪರ್ಕಗಳು, CCTV ದೃಶ್ಯಗಳು ಹಾಗೂ ಇತರೆ ತಾಂತ್ರಿಕ ಸಾಕ್ಷ್ಯಗಳನ್ನು ಪರಿಶೀಲಿಸಿ, ಕಾನೂನು ಕ್ರಮ ಕೈಗೊಳ್ಳಲಾಗಿದೆ.
- ಬಾಲಕಿಯರ ಪ್ರಕರಣಗಳಲ್ಲಿ ವಯಸ್ಸಿನ ದೃಢೀಕರಣ ಶಾಲಾ ದಾಖಲೆ, ಜನನ ಪ್ರಮಾಣಪತ್ರ ಮತ್ತಿತರ ದಾಖಲೆಗಳ ಮೂಲಕ ವಯಸ್ಸನ್ನು ಖಚಿತಪಡಿಸಿಕೊಂಡು, ಅಪ್ರಾಪ್ತೆಯೆಂದು ದೃಢಪಟ್ಟಲ್ಲಿ ಅನ್ವಯಿಸುವ POCSO Act ಹಾಗೂ ಇತರೆ ಸಂಬಂಧಿತ ಕಾನೂನುಗಳಡಿ

ಕ್ರಮ ಕೈಗೊಳ್ಳಲಾಗಿದೆ.

- ಬಾಲಕಿಯರ ಹೇಳಿಕೆ ದಾಖಲಿಸುವುದು ಬಾಲಕಿಯನ್ನು ಪತ್ತೆಹಚ್ಚಿದ ನಂತರ, ಆಕೆಯ ಹೇಳಿಕೆಯನ್ನು ಕಾನೂನುಬದ್ಧವಾಗಿ ದಾಖಲಿಸಿ, ಅಗತ್ಯವಿದ್ದಲ್ಲಿ ನ್ಯಾಯಾಲಯದ ಮುಂದೆ ಹೇಳಿಕೆ ದಾಖಲಿಸುವ ನಿಟ್ಟಿನಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗಿದೆ.

- ಮಹಿಳೆಯರ ಪ್ರಕರಣಗಳಲ್ಲಿ ಹೇಳಿಕೆ ಮತ್ತು ಪರಿಸ್ಥಿತಿಗಳ ಪರಿಶೀಲನೆ ನಡೆಸಿ ಮಹಿಳೆ ಸ್ವಯಂ ತೆರಳಿದ್ದರೆ ಅದರ ಕಾರಣ, ಆಕೆಯ ಮೇಲೆ ಯಾವುದೇ ಒತ್ತಡ/ಬೆದರಿಕೆ/ಮೋಸ ನಡೆದಿದೆಯೇ ಎಂಬುದನ್ನು ಸ್ವತಂತ್ರವಾಗಿ ಪರಿಶೀಲಿಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ.

- ಅಪಹರಣ/ಅಕ್ರಮವಾಗಿ ಕರೆದೊಯ್ಯುವಿಕೆ ಕಂಡುಬಂದಲ್ಲಿ FIR ಮತ್ತು ಬಂಧನ – ತನಿಖೆಯಲ್ಲಿ ಅಪರಾಧದ ಅಂಶಗಳು ಕಂಡುಬಂದಲ್ಲಿ ಸಂಬಂಧಪಟ್ಟ ಭಾರತೀಯ ನ್ಯಾಯ ಸಂಹಿತೆ (BNS) ಮತ್ತು ಇತರೆ ವಿಶೇಷ ಕಾನೂನುಗಳಡಿ ಪ್ರಕರಣ ದಾಖಲಿಸಿ, ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು.

- ಸಾಕ್ಷ್ಯ ಸಂಗ್ರಹಣೆ – ಮೊಬೈಲ್ ಫೋನ್, SIM, CCTV, ಬ್ಯಾಂಕ್/UPI ವ್ಯವಹಾರಗಳು, ಪ್ರಯಾಣದ ದಾಖಲೆಗಳು, ಸಾಮಾಜಿಕ ಜಾಲತಾಣದ ಚಾಟ್‌ಗಳು ಮತ್ತು ಇತರೆ ಡಿಜಿಟಲ್ ಸಾಕ್ಷ್ಯಗಳನ್ನು ಕಾನೂನುಬದ್ಧವಾಗಿ ಸಂಗ್ರಹಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು.

- ಆರೋಪಿಗಳ ವಿರುದ್ಧ ಮುಂದಿನ ಕಾನೂನು ಕ್ರಮಗಳಡಿಯಲ್ಲಿ ತನಿಖೆ ಪೂರ್ಣಗೊಂಡ ನಂತರ ಲಭ್ಯವಿರುವ ಸಾಕ್ಷ್ಯಾಧಾರಗಳ ಆಧಾರದ ಮೇಲೆ

| | | |
|---|---|---|
| | | ಆರೋಪಪಟ್ಟಿ ಸಲ್ಲಿಸಿ, ಪ್ರಕರಣವನ್ನು ನ್ಯಾಯಾಲಯದಲ್ಲಿ ಸಮರ್ಥವಾಗಿ ವಿಚಾರಣೆಗೆ ಒಳಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಪತ್ತೆಯಾದ ಪ್ರಕರಣಗಳ ಪ್ರತ್ಯೇಕ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲಾಗಿದೆ.<br>• ಪತ್ತೆಯಾದ ಪ್ರತಿಯೊಂದು ಬಾಲಕಿ/ಮಹಿಳೆ ಕಾಣೆಯಾಗಲು ಕಾರಣವಾದ ಅಂಶಗಳು, ಆರೋಪಿಗಳ ಪಾತ್ರದ ಕುರಿತು ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ. |
| ಈ) | ಇನ್ನೂ ಪತ್ತೆಯಾಗದ ಬಾಲಕಿಯರು ಹಾಗೂ ಮಹಿಳೆಯರನ್ನು ಪತ್ತೆ ಹಚ್ಚಲು ಪೊಲೀಸ್ ಇಲಾಖೆ ಕೈಗೊಂಡಿರುವ ಕ್ರಮಗಳೇನು; ವಿಶೇಷ ತಂಡಗಳನ್ನು ರಚಿಸಲಾಗಿದೆಯೇ; ಇತರ ರಾಜ್ಯಗಳ ಪೊಲೀಸ್ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಲಾಗಿದೆಯೇ; ಹಾಗೂ ಬಾಕಿ ಪ್ರಕರಣಗಳನ್ನು ಶೀಘ್ರವಾಗಿ ಸರ್ಕಾರ ಯಾವುದೇ ಕಾಲಮಿತಿಯನ್ನು ನಿಗಧಿಪಡಿಸಿದೆಯೇ? (ವಿವರ ಒದಗಿಸುವುದು) | ಇನ್ನೂ ಪತ್ತೆಯಾಗದ ಬಾಲಕಿಯರು ಹಾಗೂ ಮಹಿಳೆಯರನ್ನು ಪತ್ತೆ ಹಚ್ಚಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ:<br>• ಕಾಣೆಯಾದ ಮಹಿಳೆಯರ ಮತ್ತು ಮಕ್ಕಳ ಪತ್ತೆಗಾಗಿ ಸ್ಥಾಯಿ ಆದೇಶ ಸಂಖ್ಯೆ:1054ರನ್ವಯ ರಾಜ್ಯಾದಾದ್ಯಂತ ಎಲ್ಲಾ ಜಿಲ್ಲಾ ಮಟ್ಟದಲ್ಲಿ ಡಿ.ಎಂ.ಪಿ.ಯು (District Missing Persons Units) ಉಪ-ವಿಭಾಗೀಯ ಮಟ್ಟದಲ್ಲಿ ಎಂ.ಪಿ.ಯು. ಹಾಗೂ ಉಪ-ವಿಭಾಗದ ಡಿ.ಎಸ್.ಪಿ. ರವರುಗಳ ನೇತೃತ್ವದಲ್ಲಿ ತಂಡಗಳನ್ನು ಹಾಗೂ ಠಾಣಾ ಮಟ್ಟದಲ್ಲಿ ಎಂ.ಪಿ.ಎಸ್. (ಮಿಸ್ಸಿಂಗ್ ಪರ್ಸನ್ ಸ್ಕ್ವಾಡ್) ಗಳನ್ನು ರಚನೆ ಮಾಡಿ ಪತ್ತೆ ಕಾರ್ಯ ಕೈಗೊಳ್ಳಲಾಗಿದೆ.<br>• ಸ್ಥಾಯಿ ಆದೇಶ ಸಂಖ್ಯೆ:1054ರಲ್ಲಿ ನೀಡಲಾದ ಅಂಶಗಳನ್ನು ಪತ್ತೆ ಕಾರ್ಯದಲ್ಲಿ ಅಳವಡಿಸಿಕೊಳ್ಳಲಾಗಿದೆ.<br>• ಕಾಣೆಯಾದ ಮಕ್ಕಳ ಪತ್ತೆಗಾಗಿ "ಮಿಷನ್ ವಾತ್ಸಲ್ಯ ಡಿಜಿಟಲ್ ಪೋರ್ಟಲ್" ನಲ್ಲಿ ಅಪ್ ಲೋಡ್ ಮಾಡುವ ಮೂಲಕ ಪತ್ತೆ ಹಚ್ಚಲು ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಪೋರ್ಟಲ್‌ನಲ್ಲಿ ಮಕ್ಕಳ ಪತ್ತೆಗಾಗಿ ಹಿರಿಯ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳನ್ನು ಉಸ್ತುವಾರಿ ಅಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ. |

- ಇತರೆ ರಾಜ್ಯಗಳ ಪೊಲೀಸ್ ಇಲಾಖೆಗಳ ಸಮನ್ವಯದೊಂದಿಗೆ ಪತ್ತೆಹಚ್ಚಲಾಗುತ್ತಿದ್ದು, ಇ ಮೇಲ್ Look Out Notice ನ್ನು ದೇಶದ ಬೇರೆ ಬೇರೆ ರಾಜ್ಯಗಳಿಗೆ ರವಾನಿಸಲಾಗುತ್ತಿದೆ.

- ಮಕ್ಕಳ ಅಪಹರಣ ಹಾಗೂ ಕಾಣೆ ಪ್ರಕರಣಗಳ ತನಿಖೆಯನ್ನು ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ವಯ ನಿರ್ವಹಿಸಲಾಗುತ್ತಿದೆ. ಈ ಸಂಬಂಧ ಹೊರಡಿಸಿರುವ ಸುತ್ತೋಲೆಯನ್ವಯ ಅಪಹರಣ ಮತ್ತು ಕಾಣೆ ಪ್ರಕರಣಗಳ ಪರಿಣಾಮಕಾರಿ ತನಿಖೆಗಾಗಿ ಘಟಕಾಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಗಿದೆ.

- ಪತ್ತೆಯಾಗದ ಮಕ್ಕಳ ಅಪಹರಣ ಪ್ರಕರಣಗಳಲ್ಲಿ ತನಿಖೆಯನ್ನು ನಿರಂತರವಾಗಿ ಮುಂದುವರಿಸಲಾಗುತ್ತಿದೆ.

- ಕಾಣೆ ಅಥವಾ ಅಪಹರಣ ಪ್ರಕರಣ ವರದಿಯಾದ ತಕ್ಷಣವೇ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಯ ಹಾಗೂ ಅಪಹರಣಕ್ಕೊಳಗಾದ ಮಗುವಿನ ವಿವರಗಳನ್ನು ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೆ ರವಾನಿಸಲಾಗುತ್ತಿದೆ. ಯಾವುದೇ ಸುಳಿವು ದೊರೆಯದ ಸಂದರ್ಭದಲ್ಲಿ, ಪೋಷಕರ ಒಪ್ಪಿಗೆಯ ಮೇರೆಗೆ ಪತ್ರಿಕೆ, ದೂರದರ್ಶನ, ಆಕಾಶವಾಣಿ ಹಾಗೂ ಇತರೆ ಮಾಧ್ಯಮಗಳ ಮೂಲಕ ಮಾಹಿತಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

- ರಾಜ್ಯದ ಗಡಿ ಪ್ರದೇಶಗಳು, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಭಿತ್ತಿಪತ್ರಗಳು ಹಾಗೂ ಮಗುವಿನ ಛಾಯಾಚಿತ್ರಗಳನ್ನು ಅಂಟಿಸಿ ಪತ್ತೆ ಕಾರ್ಯ

ಕೈಗೊಳ್ಳಲಾಗುತ್ತಿದೆ.

- ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿಗಳೊಂದಿಗೆ ಸಂಪರ್ಕ ಸಾಧಿಸಿ, ಯಾರಾದರೂ ನವಜಾತ ಮಕ್ಕಳಿಗೆ ಪಾಸ್‌ಪೋರ್ಟ್‌ಗಾಗಿ ಅರ್ಜಿ ಸಲ್ಲಿಸಿರುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ.
- ಅಗತ್ಯವಿರುವ ಸಂದರ್ಭಗಳಲ್ಲಿ ಲುಕ್‌ಔಟ್ ನೋಟಿಸ್‌ಗಳನ್ನು ಹೊರಡಿಸಿ, ಅಕ್ಕಪಕ್ಕದ ಜಿಲ್ಲೆಗಳಲ್ಲಿ ಕಾಣೆಯಾದ ಮಕ್ಕಳ ಕುರಿತು ಶೋಧ ಕಾರ್ಯ ನಡೆಸಲಾಗುತ್ತಿದೆ.
- ದಕ್ಷ ಅಧಿಕಾರಿಗಳ ತಂಡಗಳನ್ನು ರಚಿಸಿ ವಿವಿಧ ಸ್ಥಳಗಳಲ್ಲಿ ಶೋಧ ಕಾರ್ಯ ಕೈಗೊಳ್ಳಲಾಗುತ್ತಿದೆ. ಅಕ್ಕಪಕ್ಕದ ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಅಪರಿಚಿತ ಶವಗಳ UDR ಪ್ರಕರಣಗಳನ್ನು ಪರಿಶೀಲಿಸಲಾಗುತ್ತಿದೆ.
- ಜಿಲ್ಲಾ ಅಪರಾಧ ದಾಖಲೆ ವಿಭಾಗಗಳಲ್ಲಿ ಲಭ್ಯವಿರುವ ವರದಿಗಳು ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ.
- ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ವಿವಿಧ ಹೆಸರುಗಳ ಅಡಿಯಲ್ಲಿ ವಿಶೇಷ ಪಡೆಗಳನ್ನು ರಚಿಸಲಾಗಿದೆ. ಸದರಿ ಪಡೆಗಳಿಂದ ನಗರ ಹಾಗೂ ಜಿಲ್ಲಾವ್ಯಾಪ್ತಿಯ ಶಾಲಾ-ಕಾಲೇಜುಗಳು, ಪಾರ್ಕ್‌ಗಳು, ಹಾಸ್ಟೆಲ್‌ಗಳು, ಪಿಜಿಗಳು, ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಹಾಗೂ ಮಹಿಳೆಯರು ಮತ್ತು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುವ ಇತರೆ ಸ್ಥಳಗಳಲ್ಲಿ ಪ್ರತಿದಿನ ಗಸ್ತು ಕರ್ತವ್ಯ ನಿರ್ವಹಿಸಲಾಗುತ್ತಿದೆ.
- ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು, ವಿಮಾನ ನಿಲ್ದಾಣಗಳು, ಜನನಿಬಿಡ ಪ್ರದೇಶಗಳು ಹಾಗೂ ಇತರೆ ಪ್ರಮುಖ ಸ್ಥಳಗಳನ್ನು ಗುರುತಿಸಿ CCTV ಕ್ಯಾಮರಾಗಳನ್ನು ಅಳವಡಿಸಲಾಗಿದ್ದು,

ಅವುಗಳ ಮೂಲಕ ಮಹಿಳೆಯರು ಮತ್ತು ಮಕ್ಕಳ ಕಳ್ಳಸಾಗಣೆಯಲ್ಲಿ ತೊಡಗಿರುವವರ ಚಟುವಟಿಕೆಗಳ ಮೇಲೆ ನಿಗಾ ವಹಿಸಲಾಗುತ್ತಿದೆ.

- ಅಪರಾಧ ನಡೆದ ಸ್ಥಳ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಲಭ್ಯವಿರುವ CCTV ಕ್ಯಾಮರಾಗಳ ದೃಶ್ಯಾವಳಿಗಳನ್ನು ಪರಿಶೀಲಿಸಿ, ಆರೋಪಿಗಳು ಹಾಗೂ ಅಪಹರಣಕ್ಕೊಳಗಾದ ಮಗುವಿನ ಚಲನವಲನದ ಕುರಿತು ಮಾಹಿತಿ ಸಂಗ್ರಹಿಸಲಾಗುತ್ತಿದೆ.

- ಲಭ್ಯವಿರುವ ಮಾಹಿತಿಯ ಆಧಾರದ ಮೇಲೆ ಮಗುವಿನ ದೈಹಿಕ ಚಹರೆಯನ್ನು TrackChild ತಂತ್ರಾಂಶದಲ್ಲಿ ದಾಖಲಿಸಿ, Missing Persons Bureauಗೆ ಕಳುಹಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

- ಮಾನವ ಕಳ್ಳಸಾಗಣೆ ಪ್ರಕರಣಗಳನ್ನು ತಡೆಗಟ್ಟುವ ಉದ್ದೇಶದಿಂದ ಮಾನವ ಕಳ್ಳಸಾಗಣೆ ನಿಷೇಧ ಘಟಕ, ಸಂಬಂಧಪಟ್ಟ SCRB (ರಾಜ್ಯ ಅಪರಾಧ ದಾಖಲೆ ಘಟಕ) ಹಾಗೂ NCRB (ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ) ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಮಾನವ ಕಳ್ಳಸಾಗಣೆ ಅಪರಾಧಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

- ಅಪಹರಣಕ್ಕೊಳಗಾದ ಮಗುವಿನ ಭಾವಚಿತ್ರ ಮತ್ತು ವಿವರಗಳನ್ನು ಒಳಗೊಂಡ ನೋಟಿಸ್‌ಗಳನ್ನು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಂಟಿಸುವುದರ ಜೊತೆಗೆ, ಸಾಮಾಜಿಕ ಜಾಲತಾಣಗಳ ಮೂಲಕ ವ್ಯಾಪಕ ಪ್ರಚಾರ ನೀಡಲಾಗುತ್ತಿದೆ. ಈ ಮೂಲಕ ಎಲ್ಲಾ ವರ್ಗದ ಸಾರ್ವಜನಿಕರನ್ನು ತಲುಪಿ, ಸಾರ್ವಜನಿಕರ ಸಹಕಾರದೊಂದಿಗೆ ಅಪಹರಣಕ್ಕೊಳಗಾದ ಮಗು ಹಾಗೂ ಆರೋಪಿಯನ್ನು ಪತ್ತೆಹಚ್ಚಲು ಕ್ರಮ

ಕೈಗೊಳ್ಳಲಾಗುತ್ತಿದೆ.

- ಶಾಪಿಂಗ್ ಮಾಲ್‌ಗಳು, ಉದ್ಯಾನವನಗಳು, ಮನರಂಜನಾ ಸ್ಥಳಗಳು, ಕ್ರೀಡಾ ಸ್ಥಳಗಳು ಹಾಗೂ ಅಪಹರಣಕ್ಕೊಳಗಾದ ಮಕ್ಕಳು ಸಾಮಾನ್ಯವಾಗಿ ಕಂಡುಬರುವ ಸಾಧ್ಯತೆ ಇರುವ ಇತರೆ ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಿ, ಮಗುವನ್ನು ಹಾಗೂ ಆರೋಪಿಯನ್ನು ಪತ್ತೆಹಚ್ಚಲು ಕ್ರಮ ಕೈಗೊಳ್ಳಲಾಗುತ್ತಿದೆ.

- ಸರ್ಕಾರೇತರ ಸಂಸ್ಥೆಗಳ (NGO) ಸಹಕಾರದೊಂದಿಗೆ ಕಾಣೆಯಾದ ಮಕ್ಕಳ ಪತ್ತೆಗಾಗಿ ನಿರಂತರ ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

- ನಿರ್ಮಾಣ ಹಂತದಲ್ಲಿರುವ ಕಟ್ಟಡಗಳು, ಬಳಕೆಯಾಗದ ಕಟ್ಟಡಗಳು, ಆಸ್ಪತ್ರೆಗಳು, ಔಷಧಾಲಯಗಳು, ರೈಲ್ವೆ ಪೊಲೀಸ್ ಘಟಕಗಳು ಹಾಗೂ ಇತರೆ ಸಂಬಂಧಿತ ಸ್ಥಳಗಳಲ್ಲಿ ವಿಚಾರಣೆ ನಡೆಸಿ, ಲಭ್ಯವಾಗುವ ಮಾಹಿತಿಯನ್ನು ಸಂಗ್ರಹಿಸುವ ಮೂಲಕ ಅಪಹರಣಕ್ಕೊಳಗಾದ ಮಗು ಮತ್ತು ಆರೋಪಿಯನ್ನು ಪತ್ತೆಹಚ್ಚಲು ಕ್ರಮ ಕೈಗೊಳ್ಳಲಾಗುತ್ತಿದೆ.

- ಕಾಣೆಯಾದ ಪ್ರಕರಣಗಳಲ್ಲಿ 60 ದಿನಗಳೊಳಗೆ ಪತ್ತೆಯಾಗದ ಪ್ರಕರಣಗಳನ್ನು ಪರಿಣಾಮಕಾರಿ ತನಿಖೆಗಾಗಿ ವಿಶೇಷ ಘಟಕವಾದ "AHTU (Anti Human Trafficking Unit)"ಗಳಿಗೆ ವರ್ಗಾಯಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

- ರಾಜ್ಯದಲ್ಲಿ ಮಾನವ ಕಳ್ಳಸಾಗಣೆಯನ್ನು ತಡೆಗಟ್ಟುವ ಉದ್ದೇಶದಿಂದ ಒಟ್ಟು 35 AHTU (Anti Human Trafficking Unit) ಘಟಕಗಳನ್ನು ಸ್ಥಾಪಿಸಲಾಗಿದೆ.

- ಅನಾಥಾಶ್ರಮಗಳು, ಆಶ್ರಮಗಳು, ಆಧ್ಯಾತ್ಮಿಕ ಸ್ಥಳಗಳು, ಬಾಲಮಂದಿರಗಳು ಹಾಗೂ ಮಕ್ಕಳ ಆಶ್ರಯ ಕೇಂದ್ರಗಳಲ್ಲಿ

| | | |
|---|---|---|
| | | ಕಾಣೆಯಾದ ಮಕ್ಕಳ ಕುರಿತು ಪರಿಶೀಲನೆ ಮತ್ತು ಶೋಧ ಕಾರ್ಯ ನಡೆಸಲಾಗುತ್ತಿದೆ.<br><br>▪ ಪೊಲೀಸ್ ಠಾಣಾ ವ್ಯಾಪ್ತಿಯ ಬೀಟ್ ಸಿಬ್ಬಂದಿ ಹಾಗೂ ಬೀಟ್ ಗ್ರೂಪ್ ಸದಸ್ಯರ ಮೂಲಕ ಮಾನವ ಕಳ್ಳಸಾಗಣೆಗೆ ಸಂಬಂಧಿಸಿದ ಮುಂಚಿತ ಮಾಹಿತಿಯನ್ನು ಸಂಗ್ರಹಿಸಿ, ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ವ್ಯವಸ್ಥೆ ಮಾಡಲಾಗಿದೆ.<br><br>▪ ಅಪಹರಣಕ್ಕೊಳಗಾದ ಬಾಲಕ/ಬಾಲಕಿಯ ಹಾಗೂ ಆರೋಪಿತರ ಮೊಬೈಲ್ ಸಂಖ್ಯೆ, ಇ-ಮೇಲ್ ಐಡಿ ಮತ್ತು ಸಾಮಾಜಿಕ ಜಾಲತಾಣಗಳಾದ WhatsApp, Facebook, Instagram ಮುಂತಾದವುಗಳ ಕುರಿತು ಕಾನೂನುಬದ್ಧವಾಗಿ ಪರಿಶೀಲನೆ ನಡೆಸಿ, ಅವರ ಪತ್ತೆಗಾಗಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಹೆಚ್‌ಡಿ 76 ಪಿಸಿಕ್ಯೂ 2026

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು

## ಅನುಬಂಧ-1

### ಕಾಣೆಯಾದ ಮಹಿಳೆಯರು

| ಕ್ರ. ಸಂ. | ಕಲ್ಯಾಣ ಕರ್ನಾಟಕ ಜಿಲ್ಲೆ ಹೆಸರು | 2023 | | | 2024 | | | 2025 | | | 2026 (ಜುಲೈ) | | |
|---|---|---|---|---|---|---|---|---|---|---|---|---|---|
| | | ಕಾಣೆ | ಪತ್ತೆ | ಪತ್ತೆ ಹಚ್ಚ ಬೇಕಾದ | ಕಾಣೆ | ಪತ್ತೆ | ಪತ್ತೆ ಹಚ್ಚ ಬೇಕಾದ | ಕಾಣೆ | ಪತ್ತೆ | ಪತ್ತೆ ಹಚ್ಚ ಬೇಕಾದ | ಕಾಣೆ | ಪತ್ತೆ | ಪತ್ತೆ ಹಚ್ಚ ಬೇಕಾದ |
| 1 | ಕಲಬುರಗಿ ನಗರ | 121 | 117 | 4 | 150 | 145 | 5 | 192 | 187 | 5 | 92 | 70 | 22 |
| 2 | ಕಲಬುರಗಿ ಜಿಲ್ಲೆ | 117 | 115 | 0 | 144 | 136 | 0 | 228 | 215 | 2 | 174 | 112 | 0 |
| 3 | ವಿಜಯನಗರ ಜಿಲ್ಲೆ | 159 | 154 | 5 | 185 | 181 | 4 | 220 | 214 | 6 | 117 | 1105 | 7 |
| 4 | ಕೊಪ್ಪಳ ಜಿಲ್ಲೆ | 158 | 153 | 5 | 187 | 185 | 2 | 249 | 247 | 2 | 145 | 132 | 13 |
| 5 | ಬೀದರ್ ಜಿಲ್ಲೆ | 163 | 155 | 8 | 210 | 205 | 5 | 281 | 280 | 1 | 201 | 185 | 16 |
| 6 | ಬಳ್ಳಾರಿ ಜಿಲ್ಲೆ | 95 | 88 | 7 | 136 | 130 | 6 | 143 | 132 | 11 | 112 | 87 | 25 |
| 7 | ರಾಯಚೂರು ಜಿಲ್ಲೆ | 209 | 204 | 5 | 193 | 189 | 4 | 277 | 275 | 2 | 213 | 197 | 16 |
| 8 | ಯಾದಗಿರಿ ಜಿಲ್ಲೆ | 71 | 71 | 0 | 100 | 97 | 03 | 109 | 109 | 0 | 84 | 79 | 06 |

## ಅನುಬಂಧ-2

### ಕಾಣೆಯಾದ/ಅಪಹರಣವಾದ ಅಪ್ರಾಪ್ತರು

| ಕ್ರ. ಸಂ. | ಕಲ್ಯಾಣ ಕರ್ನಾಟಕ ಜಿಲ್ಲೆ ಹೆಸರು | 2023 | | | 2024 | | | 2025 | | | 2026 (ಜುಲೈ) | | |
|---|---|---|---|---|---|---|---|---|---|---|---|---|---|
| | | ಕಾಣೆ | ಪತ್ತೆ | ಪತ್ತೆ ಹಚ್ಚ ಬೇಕಾದ | ಕಾಣೆ | ಪತ್ತೆ | ಪತ್ತೆ ಹಚ್ಚ ಬೇಕಾದ | ಕಾಣೆ | ಪತ್ತೆ | ಪತ್ತೆ ಹಚ್ಚ ಬೇಕಾದ | ಕಾಣೆ | ಪತ್ತೆ | ಪತ್ತೆ ಹಚ್ಚ ಬೇಕಾದ |
| 1 | ಕಲಬುರಗಿ ನಗರ | 25 | 25 | 0 | 44 | 44 | 0 | 50 | 50 | 0 | 37 | 34 | 3 |
| 2 | ಕಲಬುರಗಿ ಜಿಲ್ಲೆ | 69 | 68 | 1 | 87 | 85 | 2 | 94 | 91 | 3 | 71 | 63 | 8 |
| 3 | ವಿಜಯನಗರ ಜಿಲ್ಲೆ | 31 | 31 | 0 | 38 | 38 | 0 | 46 | 46 | 0 | 36 | 34 | 2 |
| 4 | ಕೊಪ್ಪಳ ಜಿಲ್ಲೆ | 50 | 50 | 0 | 59 | 58 | 1 | 55 | 54 | 1 | 42 | 34 | 8 |
| 5 | ಬೀದರ್ ಜಿಲ್ಲೆ | 62 | 62 | 0 | 79 | 79 | 0 | 94 | 94 | 0 | 56 | 54 | 2 |
| 6 | ಬಳ್ಳಾರಿ ಜಿಲ್ಲೆ | 35 | 35 | 0 | 29 | 28 | 1 | 36 | 36 | 0 | 29 | 28 | 1 |
| 7 | ರಾಯಚೂರು ಜಿಲ್ಲೆ | 75 | 75 | 0 | 90 | 90 | 0 | 71 | 71 | 0 | 61 | 60 | 1 |
| 8 | ಯಾದಗಿರಿ ಜಿಲ್ಲೆ | 41 | 41 | 0 | 50 | 50 | 0 | 50 | 50 | 0 | 46 | 45 | 1 |